(ಶ್ರೀ ಹೆಚ್.ಡಿ. ರೇವಣ್ಣ, ಶ್ರೀ ವೈ.ಎಸ್.ವಿ. ದತ್ತಾ, ಮಾನ್ಯ ಸದಸ್ಯರುಗಳು ವಿದ್ಯುತ್ ಸಮಸ್ಯೆಯ ಬಗ್ಗೆ ನಿಯಮ 60 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೋರಿದಾಗ ನಿಯಮ 69 ರ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡುತ್ತೇನೆಂದು ಮಾನ್ಯ ಸಭಾಧ್ಯಕ್ಷರು ತೀರ್ಮ ನೀಡಿದರು.)

4. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಅನುದಾನ ಬೇಡಿಕೆಯ ಮೇಲೆ ಮುಂದುವರೆದ ಚರ್ಚೆ

ಬೇಡಿಕೆ ಸಂಖ್ಯೆ: 7:

ಬೇಡಿಕೆ ಹೆಸರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ

ಅಧ್ಯಕ್ಷರು:– ಈಗ ಶ್ರೀಮತಿ ಶಶಿಕಲಾ ಅ. ಜೊಲ್ಲೆಯವರು ಮಾತನಾಡುವುದು.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):– ಮಾನ್ಯ ಅಧ್ಯಕ್ಷರೆ, ಪ್ರಥಮಬಾರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತಾ, ಇವತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬಗ್ಗೆ ಅನೇಕ ಹಿರಿಯ ಸಹೋದರರು ಬಹಳಷ್ಟು ಕೂಲಂಕಷವಾಗಿ ಚರ್ಚೆಯನ್ನು ಮಾಡಿದ್ದಾರೆ. ಗ್ರಾಮದ ಅಭಿವೃದ್ಧಿಯಿಂದಲೇ ನಮ್ಮ ದೇಶದ ಅಭಿವೃದ್ಧಿ ಎಂದು ಗಾಂಧೀಜಿಯವರು, ನಮ್ಮ ಹಿರಿಯರು ಕಂಡಂತಹ ಕನಸು ನಿಜವಾಗಿಯೂ ಒಂದು ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ಆ ಕನಸನ್ನು ಕಂಡಿದ್ದರು. ಅದೇ ರೀತಿಯಾಗಿ ನಮ್ಮ ಭಾರತ ದೇಶ ಶೇ.70 ರಷ್ಟು ಹಳ್ಳಿಗಳಿಂದ ಕೂಡಿರುವುದನ್ನು ನೋಡಿದರೆ ಇವತ್ತಿನ ದಿವಸ ಸಮಾಜದಲ್ಲಿನ ಒಬ್ಬ ಕಟ್ಟಕಡೆಯ ವ್ಯಕ್ತಿ ನೆಮ್ಮದಿಯ ಬದುಕನ್ನು ಸಾಧಿಸಲು ಸಾಧ್ಯ ಮಾಡುವ ಇಲಾಖೆ ಯಾವುದಾದರೂ ಇದೆ